# Glimpses of activities of Student READY RAWE programme

| | |
|---|---|
|  |  |
| Participatory Rural Appraisal | General Body Meeting |
|  |  |
| Vanamahotsava | Animal Health Campaign |
|  |  |
| Agricultural Information Centre | Trash management in sugarcane |



Integrated Crop Management in Paddy



ICM in horticultural crops




Apiculture and sericulture importance



Problematic soil management



Use improve farm machinaries in agriculture




Nutritional garden



Agroforestry and crop insurance



Demonstration on soil sampling




Seed treatment demonstration



Mushroom cultivation demonstration

| | |
|---|---|
|  |  |
| Use of trichoderma in compost enrichment | Paddy seedling root dip in bio-pesticide |

| |
|---|
|  |
| Treatment of sugarcane sett with bio-pesticides |



Case worm management in paddy using rope pulling technique




Farm and home visit by students




Demonstration on preparation of value added products from cereals and pulses

| | |
|---|---|
|  |  |
| Identification of adultration in chemical fertilizers | Street play on importance of scientific agriculture |
|  |  |
| Root feeding demonstration in coconut | Farmers visit to Information Centre |
|   |   |
| Farmers visit to College of Agriculture, VC Farm, Mandya as educational tour | Information collection from farmers by RAWE students |




Farmers visit to College of Agriculture, VC Farm, Mandya as educational tour



Campagin on Root grub management




Integrated Nutrient Management in coconut




Campaign on storage pests management



Campaign on plastic and parthenium eradication



Integrated pest management in agricultural and horticultural crops



Different composting techniques demonstration





Scientists of CoA, VC Farm, Mandya visit to students demonstration plots in RAWE villages



Visit to Nutritional garden by experts of College





Animal Health Campaign






| | |
|---|---|
| Paddy seedling treatment and row planting demonstration | Soil sampling demonstration |

# ಪಶು ಆರೋಗ್ಯ ತಪಾಸಣಾ ಶಿಬಿರ



ತಿ.ನರಸೀಪುರ: ಜಾನುವಾರುಗಳಿಗೆ ಸೋಂಕು ತಗುಲಿದ ನಂತರ ಗುಣಪಡಿಸಲು ಕಷ್ಟ ಸಾಧ್ಯ. ಮುನ್ನೆಚರಿಕೆ ಕ್ರಮವಾಗಿ ಲಸಿಕೆ ಹಾಕಿಸಿ ರೋಗ ತಡೆಯಬಹುದು ಎಂದು ಪಶು ಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಆನಂದ್ ಸಲಹೆ ನೀಡಿದರು.

ತಾಲ್ಲೂಕಿನ ವೀರಪ್ಪ ಒಡೆಯರಹುಂಡಿ ಗ್ರಾಮದಲ್ಲಿ ಗುರುವಾರ ಮಂಡ್ಯದ ಕೃಷಿ ವಿಶ್ವವಿದ್ಯಾಲಯ ಹಾಗೂ ತಾಲ್ಲೂಕು ಪಶು ಸಂಗೋಪನ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪಶು ಆರೋಗ್ಯ ತಪಾಸಣಾ ಶಿಬಿರದಲ್ಲಿ ಅವರು ಮಾತನಾಡಿದರು.

ಕಾಲುಬಾಯಿ ಜ್ವರವು ಸಾಂಕ್ರಾಮಿಕ ರೋಗವಾಗಿದ್ದು, ವೈರಸ್ ಸೋಂಕು ತಗುಲಿದ 24 ಗಂಟೆಯಲ್ಲಿ ರೋಗ ಲಕ್ಷಣಗಳು ಕಾಣಿಸುತ್ತವೆ. ಪ್ರತಿ ವರ್ಷ ಮೇ - ಜೂನ್ ಹಾಗೂ ಸೆಪ್ಟಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಲಸಿಕೆ ಹಾಕಿಸಬೇಕು ಎಂದು ಅವರು ತಿಳಿಸಿದರು.

ರಾಸುಗಳಿಗೆ ಲಸಿಕೆ ನೀಡಿ ತಪಾಸಣಾ ಅಧಿಕಾರಿ ಪ್ರಕಾಶ್ ಮಾತನಾಡಿದರು. ಕೃಷಿ ಮಹಾವಿದ್ಯಾಲಯದ ಪ್ರಾಧ್ಯಾಪಕ ಎಚ್.ಪಿ. ದಿನಕರ್, ನಾಗೇಶ್, ವೆಂಕಟೇಶ್ ತಪಾಸಣಾಧಿಕಾರಿ ಸೌಮ್ಯ ನಾರಾಯಣ್, ಶಿಬಿರಾರ್ಥಿಗಳಾದ ಅಭಿಷೇಕ್, ಅಖಿಲ, ಅಕ್ಷಯ್, ಧನುಷ್, ಚಂದ್ರಿಕ, ಹರಿಕೇಶವ್, ಮಂಜುನಾಥ್, ಪ್ರಜ್ವಲ್, ಕಾರ್ತಿಕ್ ಮೋನಿಕಾ, ನಿರೋಷ, ಶಶಿಧರ್, ಸಿಂಚನ, ಗ್ರಾಮದ ರೈತರು ಹಾಜರಿದ್ದರು.

ಕೆಮ್ಮುಗಿಲು

# ರಾಸುಗಳಿಗೆ ರೋಗ ನಿರೋಧಕ ಲಸಿಕೆ ಕಡ್ಡಾಯ

ತಿ. ನರಸೀಪುರ: ಮೂರು ತಿಂಗಳಿಗೆ ಮೇಲ್ಪಟ್ಟ ಎಲ್ಲಾ ರಾಸುಗಳಿಗೆ ಹಾಗೂ ಗರ್ಭಧರಿಸಿದ ರಾಸುಗಳಿಗೂ ಸಹ ರೋಗ ನಿರೋಧಕ ಲಸಿಕೆಯನ್ನು ಹಾಕಿಸುವುದು ಕಡ್ಡಾಯ ಎಂದು ಪಶು ವೈದ್ಯಾಧಿಕಾರಿ ಡಾ.ಜ್ಯೋತಿಲಕ್ಷ್ಮಿ ಹೇಳಿದರು.

ತಾಲ್ಲೂಕಿನ ರಂಗಸಮುದ್ರ ಗ್ರಾಮದಲ್ಲಿ ಮಂಡ್ಯ ಕೃಷಿ ಮಹಾವಿದ್ಯಾಲಯದ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಡಿಯಲ್ಲಿ ಪಶುಸಂಗೋಪನಾ ಇಲಾಖೆ, ಹಾಲು ಉತ್ಪಾದಕರ ಸಹಕಾರ ಸಂಘ ಹಾಗೂ ಅಲ್ಯುಮಿನಿ ಅಸೋಶಿಯೇಷನ್ ಅವರ ಸಂಯುಕ್ತಾಶ್ರಯದಲ್ಲಿ ದಿನಾಂಕ 19.10.2019 ರಂದು ರಂಗಸಮುದ್ರ, ಗ್ರಾಮದಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಮಾತನಾಡಿ ಮೂರು ತಿಂಗಳಿಗೆ ಮೇಲ್ಪಟ್ಟ ಎಲ್ಲಾ ರಾಸುಗಳಿಗೆ ಹಾಗೂ ಗರ್ಭಧರಿಸಿದ ರಾಸುಗಳಿಗೂ ಸಹ ರೋಗ ನಿರೋಧಕ ಲಸಿಕೆಯನ್ನು ಹಾಕಿಸುವುದು ಕಡ್ಡಾಯವಾಗಿದೆ. ಇದರಿಂದ ರಾಸುಗಳಿಗೆ



ಯಾವುದೇ ಅಡ್ಡ ಪರಿಣಾಮ ಆಗುವುದಿಲ್ಲ ಮತ್ತು ಹಾಲಿನ ಉತ್ಪಾದನಾ ಪ್ರಮಾಣವು ಕಡಿಮೆಯಾಗುವುದಿಲ್ಲ ಎಂದು ರವರು ತಿಳಿಸಿದರು. ಕಾಲುಬಾಯಿ ಜ್ವರ ಬರದಂತೆ ಲಸಿಕಾ ಕಾರ್ಯಕ್ರಮವನ್ನು ದೇಶಾದಾದ್ಯಂತ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಹಮ್ಮಿಕೊಳ್ಳಲಾಗುವುದು. ಕಾಲುಬಾಯಿ ಜ್ವರವು ಜಾನುವಾರು ಮತ್ತು ಹಂದಿಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಇದು ಸಾಂಕ್ರಾಮಿಕ ರೋಗವಾಗಿದ್ದು, ವೈರಸ್‌ಗಳ ಮೂಲಕ ಹರಡುತ್ತದೆ. ಈ ಸೋಂಕಿಗೆ ಸಿಲುಕಿದ ಜಾನುವಾರುಗಳಲ್ಲಿ ಕನಿಷ್ಠ 24 ಗಂಟೆಗಳ ನಂತರ ಇದರ ರೋಗ ಲಕ್ಷಣಗಳು ಗೋಚರವಾಗುತ್ತದೆ. ಜ್ವರ, ಕಾಲು ಹಾಗೂ ಹಲ್ಲುಗಳ ಮಧ್ಯಭಾಗ ಮತ್ತು ಬಾಯಲ್ಲಿ ಗುಳ್ಳೆಗಳು, ತೂಕ ಹಾಗೂ ಹಾಲು ಇಳುವರಿಯಲ್ಲಿ ಇಳಿಮುಖವಾಗುತ್ತದೆ ಇವು ರೋಗದ ಪ್ರಮುಖ ಲಕ್ಷಣಗಳು. ರೈತರು ಈ ಬಗ್ಗೆ ನಿಗಾ ವಹಿಸಬೇಕೆಂದು ವೈದ್ಯಾಧಿಕಾರಿಗಳು ತಿಳಿಸಿದರು.

ಸೋಂಕು ತಗಲಿದ ನಂತರ ರಾಸುಗಳನ್ನು ಗುಣಪಡಿಸುವುದು ಕಷ್ಟಕರ ಹೀಗಾಗಿ ಮುನ್ನೆಚ್ಚರಿಕೆ ಕ್ರಮವಾಗಿ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಪಶು ಸಂಗೋಪನಾ ಇಲಾಖಾ ವತಿಯಿಂದ ನೀಡಲಾಗುವ ಉಚಿತ ಲಸಿಕೆಗಳನ್ನು ಕೊಡಿಸುವಂತೆ ಕಾರ್ಯಕ್ರಮದಲ್ಲಿ ಹಾಜರಿದ್ದ ಡಾ. ಜಿ. ನಾಗೇಶ್, ಸಹ ಸಂಯೋಜಕರು, ಇವರು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಇಲಾಖೆಯ ಸಿಬ್ಬಂದಿಗಳಾದ ಡಾ. ರಂಗಸ್ವಾಮಿ, ಹಾಗೂ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ 300 ಕ್ಕೂ ಹೆಚ್ಚು ರಾಸುಗಳಿಗೆ ಲಸಿಕೆಯನ್ನು ನೀಡಲಾಯಿತು.

# ಯಶಸ್ವಿಯಾಗಿ ಜರುಗಿದ ಸ್ಪರ್ಧಾ ಕಲಿ ತರಬೇತಿ

ತಿ.ನರಸೀಪುರ: ಎಂಟನೇ ತರಗತಿ ವಿದ್ಯಾರ್ಥಿಗಳಿಗೆ ನಡೆಸುವ ಎನ್‌ಎಂಎಂಎಸ್ ಹಾಗೂ 10ನೇ ತರಗತಿ ವಿದ್ಯಾರ್ಥಿಗಳ ಎನ್ ಟಿ ಎಸ್ ಇ ಪರೀಕ್ಷೆಗೆ ಹಾಜರಾಗುವ 100 ಪರೀಕ್ಷಾರ್ಥಿಗಳಿಗೆ ನಡೆಸಿದ 10 ದಿನಗಳ ಸ್ಪರ್ಧಾಕಲಿ ತರಬೇತಿಯ ಸಮಾರೋಪ ಸಮಾರಂಭ ಪಟ್ಟಣದ ಬಿಆರ್ ಸಿ ಕೇಂದ್ರದಲ್ಲಿ ನಡೆಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿ ದೈಹಿಕ ಶಿಕ್ಷಣ ಪರಿವೀಕ್ಷಕ ಮಹಾಂತಪ್ಪ ನಾಗೂರ್ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಇಂತಹ ಪರೀಕ್ಷೆಗಳನ್ನು ಎದುರಿಸುವುದು ಸವಾಲಾಗಿದ್ದು, ತರಬೇತಿಗಳು ಅಗತ್ಯವಾಗಿದೆ. ವಿದ್ಯಾರ್ಥಿಗಳು ಚೆನ್ನಾಗಿ ಅಧ್ಯಯನ ಮಾಡಿ ಪರೀಕ್ಷೆಯಲ್ಲಿ ಪಾಸಾಗುವಂತೆ ಅವರು ಪರೀಕ್ಷಾರ್ಥಿಗಳಿಗೆ ಶುಭ ಕೋರಿದರು.

ಪ್ರೌಢಶಾಲಾ ಸಹಶಿಕ್ಷಕರ ಸಂಘ ಅಧ್ಯಕ್ಷ ಪುಟ್ಟಸ್ವಾಮಿ ಮಾತನಾಡಿ ಈ ವರ್ಷದ ಪರೀಕ್ಷೆಯಲ್ಲಿ ಆಯ್ಕೆಯಾಗುವ ಪ್ರತಿ ವಿದ್ಯಾರ್ಥಿಗೆ ವೈಯಕ್ತಿಕವಾಗಿ ತಲಾ 500 ರೂಪಾಯಿ ನೀಡುವುದಾಗಿ ಘೋಷಿಸಿದರು.

ನೋಡಲ್ ಅಧಿಕಾರಿ ಶಿಕ್ಷಣ ಸಂಯೋಜಕ ಬಿ.ಮಹದೇವಸ್ವಾಮಿ ಮಾತನಾಡಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಕಾರ, ಮಾರ್ಗದರ್ಶನದಲ್ಲಿ ಸ್ಪರ್ಧಾಕಲಿ ತರಬೇತಿ ಯಶಸ್ವಿಯಾಗಿದೆ. ತರಬೇತಿ ಪಡೆದ ಎಲ್ಲರೂ ಆಯ್ಕೆಯಾಗಬೇಕು, ಮುಂದೆ IAS, KAS, IPS ನಂತಹ ಪರೀಕ್ಷೆಗಳನ್ನು ಎದುರಿಸಲು ಈ ಪರೀಕ್ಷೆಯು ನಿಮಗೆ ಮಾದರಿಯಾಗಿದೆ ಎಂದು ತಿಳಿಸಿದರು.

ಶಿಕ್ಷಕ ಮಹೇಶ್ ಮಾತನಾಡಿ ಈ ಪರೀಕೆಯಲ್ಲಿ ಪಾಸಾದರೆ ನಿಮ್ಮ ಮುಂದಿನ ವಿದ್ಯಾಭ್ಯಾಸಕ್ಕೆ ಪ್ರತಿ ತಿಂಗಳು 1000/ ನಂತೆ 4 ವರ್ಷಗಳು ವಿದ್ಯಾರ್ಥಿ ವೇತನ ಸಿಗಲಿದೆ ಎಂದರು. ಅ. 9 ರಿಂದ 18 ರವರೆಗೆ ಸ್ಪರ್ಧಾಕಲಿ ತರಭೇತಿಯನ್ನು ಇಲಾಖೆ ಆದೇಶದಂತೆ ನಡೆಸಲಾಯಿತು. ಪರೀಕ್ಷಾರ್ಥಿಗಳು ತಮ್ಮ ಅನಿಸಿಕೆ ಹಂಚಿಕೊಂಡರು. ವಿವಿಧ ಶಾಲೆಗಳಿಂದ ಬಂದಿದ್ದ ಸಂಪನ್ಮೂಲ ಶಿಕ್ಷಕರಾದ ನಾಗರಾಜ್. ಎಸ್, (ಸಮಾಜ), ಶಶಿಕಲಾ.(ವಿಜ್ಞಾನ) ಸೋಮರಾಜು(ಗಣಿತ) ಮಹೇಶ್.ಕೆ.ಎಂ(GMAT) ಕೇತುಪುರ ಸಿ.ಆರ್.ಪಿ. ಯತೀಶ್ ಕುಮಾರ್ ರವರು ಹಾಜರಿದ್ದರು.

# ರಾಸುಗಳಿಗೆ ಕಾಲುಬಾಯಿ ಜ್ವರ ಲಸಿಕೆ ಕಡ್ಡಾಯ

## ರೋಗ ಬರುವುದಕ್ಕೆ ಮುನ್ನವೇ ಲಸಿಕೆ ಹಾಕಿಸಲು ಪ್ರಕಾಶ್ ಸಲಹೆ



ತಿ.ನರಸೀಪುರ ತಾಲೂಕಿನ ವೀರಪ್ಪ ಒಡೆಯರಹುಂಡಿ ಗ್ರಾಮದಲ್ಲಿ ಆಯೋಜಿಸಿದ್ದ ಪಶು ಆರೋಗ್ಯ ತಪಾಸಣಾ ಶಿಬಿರದಲ್ಲಿ ರಾಸುಗಳಿಗೆ ಕಾಲುಬಾಯಿ ಜ್ವರ ಲಸಿಕೆ ಹಾಕಿಸಲಾಯಿತು.

ತಿ.ನರಸೀಪುರ: [illegible]

18.2019

# ರೋಗ ನಿಯಂತ್ರಣಕ್ಕೆ ಲಸಿಕೆ ಹಾಕಿಸಿ

ವಿಜಯವಾಣಿ ಸುದ್ದಿಜಾಲ ತಿ.ನರಸೀಪುರ

ಜಾನುವಾರುಗಳಿಗೆ ಸೋಂಕು ತಗುಲಿದ ನಂತರ ಗುಣಪಡಿಸಲು ಕಷ್ಟ ಸಾಧ್ಯ. ಹೀಗಾಗಿ ಮುಂಜಾಗ್ರತಾ ಕ್ರಮವಾಗಿ ಲಸಿಕೆ ಹಾಕಿಸಿ ಎಂದು ಪಶು ಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಆನಂದ್ ಹೇಳಿದರು.

**ಹೈನುಗಾರರಿಗೆ ಆನಂದ್ ಸಲಹೆ**

ತಾಲೂಕಿನ ವೀರಪ್ಪ ಒಡೆಯರಹುಂಡಿ ಗ್ರಾಮದಲ್ಲಿ ಗುರುವಾರ ಮಂಡ್ಯದ ಕೃಷಿ ವಿಶ್ವವಿದ್ಯಾಲಯದ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ವಿದ್ಯಾರ್ಥಿಗಳು ಹಾಗೂ ತಾಲೂಕು ಪಶು ಸಂಗೋಪನಾ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪಶು ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದರು.

ಕಾಲುಬಾಯಿ ಜ್ವರವು ಸಾಂಕ್ರಾಮಿಕ ರೋಗವಾಗಿದ್ದು, ವೈರಸ್ ಸೋಂಕು ತಗುಲಿದ ತಕ್ಷಣ 24 ಗಂಟೆಯಲ್ಲಿ ರೋಗದ ಲಕ್ಷಣಗಳು ಕಾಣುತ್ತವೆ. ಜ್ವರ, ಕಾಲು ಹಾಗೂ ಹಲ್ಲುಗಳ ಮಧ್ಯಭಾಗ ಮತ್ತು ಬಾಯಿಯಲ್ಲಿ ಗುಳ್ಳೆಗಳು, ತೂಕ ಹಾಗೂ



ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ಪಶು ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಹಾಲು ಉತ್ಪಾದನೆಯಲ್ಲಿ ಇಳಿಮುಖವಾಗುವುದು ರೋಗದ ಲಕ್ಷಣವಾಗಿದೆ. ಆದ್ದರಿಂದ ಪ್ರತಿ ವರ್ಷ ಮೇ-ಜೂನ್ ತಿಂಗಳಲ್ಲಿ ಹಾಗೂ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಲಸಿಕೆ ಹಾಕಲಾಗುತ್ತದೆ ಎಂದು ತಿಳಿಸಿದರು. ಶಿಬಿರದಲ್ಲಿ ರಾಸುಗಳು, ಕುರಿ, ಮೇಕೆಗಳಿಗೆ ಲಸಿಕೆ ಹಾಕಲಾಯಿತು. ಇದೇ ವೇಳೆ ಶುದ್ಧ ಹಾಲು ಉತ್ಪಾದನಾ ಕ್ರಮಗಳ ಬಗ್ಗೆ ರೈತರಿಗೆ ಮಾಹಿತಿ ನೀಡಲಾಯಿತು. ಪ್ರಾಧ್ಯಾಪಕರಾದ ಎಚ್.ಪಿ ದಿನಕರ್, ನಾಗೇಶ್, ವೆಂಕಟೇಶ್, ತಪಾಸಣಾಧಿಕಾರಿ ಪ್ರಕಾಶ್, ಸೌಮ್ಯಾ ನಾರಾಯಣ್ ಹಾಜರಿದ್ದರು.